

ಮಾತಾಡಬೇಡ... ಹೀಗೆ ಪೋಷಕರ ಆ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ಹುಡುಗಿಯರಿಗಂತೂ ಇನ್ನೂ ಹೆಚ್ಚಿನ ನಿಯಂತ್ರಣಗಳು. ಈ 'ಬೇಡ'ಗಳ ಪಟ್ಟಿಗೆ ಇತ್ತೀಚೆಗಿನ ಹೊಸ ಸೇರ್ಪಡೆಯೆಂದರೆ ಮೊಬೈಲ್ ಹೆಚ್ಚು ನೋಡಬೇಡ, ಮೊಬೈಲ್‌ನಲ್ಲಿ ಆಡಬೇಡ, ಕೊಳಕು ಚಿತ್ರ ನೋಡಬೇಡ ಎಂಬ ಉಪದೇಶಗಳು.

ಮಕ್ಕಳಿಗೆ ಆ ವಯಸ್ಸಿನಲ್ಲಿ ಕುತೂಹಲ ಜಾಸ್ತಿ. ಪೋಷಕರು ನೋಡಬೇಡ ಎಂದದ್ದೇ ಅವರಿಗೆ ನೋಡಲು ಪ್ರೇರಣೆಯಾಗುತ್ತದೆ. ಜತೆಗೆ ಸ್ನೇಹಿತರ ಬಿಡುಬೀಸಾದ ಮಾತುಗಳೂ ಅವರ ಮೇಲೆ ಪ್ರಭಾವ ಬೀರುತ್ತವೆ. ಪೋಷಕರಿಗೂ ಇದು ಗೊತ್ತಿರುತ್ತದೆ. ಆದರೆ ಬೇರೆ ದಾರಿ ಗೊತ್ತಿಲ್ಲದ ಅವರು ತಮ್ಮ ಎಚ್ಚರಿಕೆಯ ಮಾತುಗಳನ್ನು ಮುಂದುವರಿಸುತ್ತಲೇ ಇರುತ್ತಾರೆ.

ಮಕ್ಕಳು ಮೊಬೈಲ್‌ನಲ್ಲಿ ಅಥವಾ ಟ್ಯಾಬ್‌ಗಳಲ್ಲಿ ಪ್ರಚೋದಕ ಅಥವಾ ಅಶ್ಲೀಲ ಚಿತ್ರಗಳನ್ನು ಕದ್ದು ನೋಡುವುದು, ಪೋಷಕರು ಅದನ್ನು ನಿಯಂತ್ರಿಸಲಾಗದೆ ಸಂಕಟವನ್ನು ಅನುಭವಿಸುವುದು ಈಗ ಬಹುತೇಕ ಕಡೆ ಕಂಡುಬರುವ ಸಂಗತಿ. ಇನ್ನೊಬ್ಬರೊಂದಿಗೆ ಅದನ್ನು ಹೇಳಿಕೊಳ್ಳಲೂ ಆಗದಂತಹ ಪರಿಸ್ಥಿತಿ. ಹೇಳಿದರೆ ತಮ್ಮ ಮಕ್ಕಳ ಬಗ್ಗೆ ಅವರೇನು ತಿಳಿದುಕೊಳ್ಳುತ್ತಾರೋ ಎನ್ನುವ ಆತಂಕ. ಕೆಲವರು, 'ಇರ್ಲಿ ಬಿಡು, ಎಲ್ಲ ಮಕ್ಕಳೂ ಹೀಗೆಯೇ ಇರುತ್ತಾರೆ' ಎಂದುಕೊಳ್ಳುವುದುಂಟು. ಇನ್ನು ಕೆಲವರಿಗೆ ಇತರರ ಜತೆ ಹೇಳಿಕೊಳ್ಳಲು ಸಂಕೋಚ. ಕೆಲವರು ಮಕ್ಕಳಿಗೆ ಗದರಿ ಸುಮ್ಮನಾಗುತ್ತಾರೆ. ಒಂದು ಮಟ್ಟದಲ್ಲಿ ಅದು ಸುಲಭದ ಕೆಲಸವೂ ಹೌದು. ಆದರೆ ಅದು ಪರಿಹಾರವಲ್ಲ. ಇದು ಖಂಡಿತವಾಗಿಯೂ ಪೋಷಕರು ಸುಮ್ಮನಾಗುವ ವಿಷಯವಲ್ಲ. ಸಹಜವೆಂದು ಬಿಟ್ಟು ಬಿಡುವ ವಿಷಯವೂ ಅಲ್ಲ. ಎಷ್ಟೋ ಸಂದರ್ಭಗಳಲ್ಲಿ ಮಕ್ಕಳು ತಮ್ಮ ಮೊಬೈಲ್‌ಗೆ ಪಾಸ್‌ವರ್ಡ್ ಅಥವಾ ಪಿನ್ ಲಾಕ್ ಮಾಡಿ ಯಾರೂ ನೋಡದಂತೆ ಮಾಡಿಡುತ್ತಾರೆ. ಅಥವಾ ಗುಟ್ಟಾಗಿ ತಮ್ಮ ಕೋಣೆಯಲ್ಲೋ ಅಥವಾ ಮಲಗುವ ಸಂದರ್ಭದಲ್ಲೋ ಮೊಬೈಲ್ ಬಳಸುತ್ತಿರುತ್ತಾರೆ. ಹಾಗೇನಾದರೂ ಮಕ್ಕಳು ಮಾಡುತ್ತಿದ್ದರೆ ಮಕ್ಕಳ ಮನಸ್ಸು ಆ ಕಡೆಗೆ ವಾಲುತ್ತಿದೆಯೆಂದೇ ಅರ್ಥ. ಮೊಬೈಲ್ ಮಾತ್ರವಲ್ಲ, ಕಂಪ್ಯೂಟರ್, ಲ್ಯಾಪ್‌ಟಾಪ್ ಮೂಲಕವೂ ಮಕ್ಕಳು ಅಶ್ಲೀಲ ಚಿತ್ರಗಳ ಕಡೆಗೆ ವಾಲುತ್ತಾರೆ.

### ಈ ಕ್ರಮ ಸಹಜವೇ?


ಹದಿಹರೆಯದ ಮಕ್ಕಳಲ್ಲಿ ಈ ಕ್ರಮ ಸಹಜವೇ? ಅದು ಒಳ್ಳೆಯದೇ? ತಪ್ಪೇ? ತಪ್ಪಾಗಿದ್ದರೆ ಮಕ್ಕಳನ್ನು ತಡೆಯುವುದೆಂತು? ಸಹಜವಾಗಿ ಕ್ರಮೇಣ ಸರಿಯಾಗುತ್ತಾರೆಯೇ? ಇದರಿಂದಾಗುವ ಪರಿಣಾಮಗಳೇನು? ಈ ಮಾಯಾಜಾಲದಿಂದ ಮಕ್ಕಳನ್ನು ಹೊರತರುವುದು ಎಂತು?

ಈ ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರ ನಿಜಕ್ಕೂ ಕಷ್ಟ. ಎಷ್ಟೋ ಸಂದರ್ಭದಲ್ಲಿ ಪರಿಹಾರ ಕಾಣದೆ ಪೋಷಕರೂ, ಶಿಕ್ಷಕರೂ ಕೈಚೆಲ್ಲಿದ ಪ್ರಕರಣಗಳಿವೆ.

## ಸಾಮಾಜಿಕ ಜಾಲತಾಣದ ಅಪಾಯಗಳು

ಸಾಮಾಜಿಕ ಜಾಲತಾಣಗಳಿಗೆ ದಾಸರಾಗುವುದರಿಂದ ಮಕ್ಕಳ ಮೇಲೆ ಹಲವು ರೀತಿಯ ದುಷ್ಪರಿಣಾಮಗಳು ಉಂಟಾಗುತ್ತವೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಅಂತರ್ಜಾಲದ ಮೂಲಕ ಮಾಫಿಯಾಗಿರಿಗೆ (ಸೈಬರ್ ಬುಲ್ಲಿಯಿಂಗ್) ಮಕ್ಕಳ ದುರ್ಬಳಕೆ.
- ಅತಿ ಹೆಚ್ಚಿನ ವೈಯಕ್ತಿಕ ಮಾಹಿತಿಗಳನ್ನು ಅಪರಿಚಿತರೊಂದಿಗೆ ಹಂಚಿಕೊಳ್ಳುವುದು.
- ಮುಂದೆ ಪಶ್ಚಾತ್ತಾಪ ಪಡಬೇಕಾಗುವಂತಹ ಚಿತ್ರಗಳನ್ನು ವೀಡಿಯೋಗಳನ್ನು ಹಂಚಿಕೊಳ್ಳುವುದು, ದುಃಖ ಪಡುವುದು, ಖಿನ್ನತೆಗೆ ಒಳಗಾಗುವುದು.
- ಪ್ರಾಯಕ್ಕೆ ಮೀರಿದ ಚಿತ್ರಗಳನ್ನು, ವೀಡಿಯೋಗಳನ್ನು, ಜಾಹಿರಾತುಗಳನ್ನು ವೀಕ್ಷಿಸುವುದು ಹಾಗೂ ಇದರಿಂದಾಗಿ ಉಂಟಾಗುವ ಸಾಮಾಜಿಕ– ಮಾನಸಿಕ ದುಷ್ಪರಿಣಾಮಗಳು.
- ಖಾಸಗಿ ಮಾಹಿತಿಯ ಸೋರಿಕೆ ಹಾಗೂ ಅದರ ದುರ್ಬಳಕೆ.
- ದೈಹಿಕ ಚಟುವಟಿಕೆಗಳ ಕೊರತೆಯಿಂದಾಗಿ ಆರೋಗ್ಯ ಹದಗೆಡುವುದು, ಬೊಜ್ಜು ಮುಂತಾದ ಸಮಸ್ಯೆಗಳು.
- ಪುಟಾಣಿ ಮಕ್ಕಳಿಗೆ ಮಾತಿನ ತೊಂದರೆ ಹಾಗೂ ಇತರ ಸಂವಹನ ಸಂಬಂಧಿ ಸಮಸ್ಯೆಗಳು.
- ಸದಾ ಕಾಲ ಇದೇ ಚಟುವಟಿಕೆ ನಡೆಸುವುದರಿಂದ ಬೇರೆಡೆಗೆ ಆಸಕ್ತಿ ಇಲ್ಲದಂತಾಗುವುದು.
- ಕೌಟುಂಬಿಕ ಸಂಬಂಧಗಳಿಗೆ ಬೆಲೆ ಕೊಡದೇ ಇರುವುದು.
- ಮನೆಯ ದಿನನಿತ್ಯದ ಚಟುವಟಿಕೆಗಳೆಡೆಗೆ ಆಸಕ್ತಿ ಇಲ್ಲದಂತಾಗುವುದು.

# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಬೆಂಗಳೂರು ಮೈಸೂರು 9880444450